**CW1/PW1–Nanjundaswamy**

**ಸಾಕ್ಷಿಯನ್ನು ದಿನಾಂಕಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಎಸ್ ಬಿ ವಕೀಲರಿಂದಃ**

ನಿಪಿ–1ರ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿದೆಯೇ ಎಂದರೆ ಸಾಕ್ಷಿಯು ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ರ ದೂರನಲ್ಲಿ ಏನು ಘಟನೆ ನಡೆಯಲಾಗಿದೆ ಅದರೆ ಬಗ್ಗೆ ಬರೆಸಿರುತ್ತೇನೆ. ನನ್ನ ಬಳಿ ಎರಡು ಹಸುಗಳು ಇದ್ದಿದ್ದವು. ನಾನು ಸದರಿ ಹಸುಗಳನ್ನು ಮೈಸೂರು ಕಡೆಗೆ ಇರುವ ಜಮೀನಿನಲ್ಲಿ ಮೇಯಿಸಿಕೊಂಡಿದ್ದೆ.ನಾನು ಅವುಗಳನ್ನು ಮೇಯಿಸಲು ಕುತ್ತಿಗೆಗೆ ಹಗ್ಗ ಹಾಕಿಸಿಕೊಂಡು ಹಿಡಿದುಕೊಂಡು ಹೋಗುತ್ತೇನೆ. ಆ ರೀತಿ ನಮಗೆ ಜಮೀನು ಇರುವ ಬಗ್ಗೆ ಪೋಲಿಸರಿಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ನಾನು ಸದರಿ ದಿನದಂದು ಹಸುಗಳನ್ನು ಹಿಡಿದುಕೊಂಡು ಮೈಸೂರಿನಿಂದ ಆಲನಹಳ್ಳಿ ಕಡೆ ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದೇನು. ನಾನು ಆ ದಿನ ರಸ್ತೆ ಎಡಭಾಗದ ಪಾದಾಚಾರಿ ಮಾರ್ಗದಲ್ಲಿ ಹಸುಗಳನ್ನು ಹಿಡಿದುಕೊಂಡು ಬರುತ್ತಿದ್ದೆನು. ಸದರಿ ರಸ್ತೆ ಮೈಸೂರು ಗದ್ದಿಗೆ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಮೈಸೂರಿನಿಂದ ಗದ್ದಿಗೆ ಕಡೆ ಹಾಗೂ ಗದ್ದಿಗೆ ಕಡೆಯಿಂದ ಮೈಸೂರು ಕಡೆಗೆ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಆರೋಪಿಯು ಎಷ್ಟು ವೇಗವಾಗಿ ಆಟೋ ಚಲಾಯಿಸಿಕೊಂಡು ಬಂದಿರುತ್ತಾನೆ ಎಂಬುದನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ವೇಗವಾಗಿ ಬಂದು ರಸ್ತೆಯಲ್ಲಿದ್ದ ಹಂಪ್ ಅನ್ನು ಹಾರಿಸಿ ಹಸುವಿಗೆ ಡಿಕ್ಕಿಪಡಿಸಿರುತ್ತಾನೆಂದು ನುಡಿಯುತ್ತಾರೆ. ಸದರಿ ಸ್ಥಳದ ಅಕ್ಕಪಕ್ಕ ಶಾಲೆ, ಅಂಗಡಿ ಹಾಗೂ ಮನೆ ಇರುತ್ತವೆ ಎಂದರೆ ಸಾಕ್ಷಿಯು ಶಾಲೆ ಹಾಗೂ ಮನೆಗಳು ಇರುತ್ತವೆ ಆದರೆ ಯಾವುದೇ ಅಂಗಡಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನಗೆ ಹಾಗೂ ನನ್ನ ಇನ್ನೊಂದು ಹಸುವಿಗೆ ಯಾವುದೇ ಗಾಯಗಳಾಗಿರುವುದಿಲ್ಲ. ಆ ರೀತಿ ಆರೋಪಿ ಅಪಘಾತಪಡಿಸಿದ ತಕ್ಷಣ ನಾನು ಜೋರಾಗಿ ಕೂಗಿಕೊಂಡಿದ್ದು ಆಗ ಊರಿನವರೆಲ್ಲ ಅಲ್ಲಿ ಸೇರಿರುತ್ತಾರೆ. ಆ ರೀತಿ ಅಪಘಾತಪಡಿಸಿದ ಸಮಯದಲ್ಲಿ ದೇವರಾಜು ಹಾಗೂ ಶಿವಣ್ಣ ಎನ್ನುವವರು ಹಿಂದಿನಿಂದ ನಡೆದುಕೊಂಡು ಬರುತ್ತಿದ್ದರು. ನಾನು ಪೋಲಿಸರಿಗೆ ನೀಡಿದ್ದ ದೂರಿನಲ್ಲಿ ಸದರಿ ದೇವರಾಜು ಹಾಗೂ ಶಿವಣ್ಣ ಎನ್ನುವವರು ನನ್ನ ಹಿಂದೆ ಬರುತ್ತಿದ್ದ ವಿಚಾರವನ್ನು ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ತಿಳಿಸುತ್ತಿದ್ದೇನೆ ಎಂದರೆ ಸರಿ. ಸದರಿ ಘಟನೆ ನಡೆದ ದಿನ ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದ ಮರುದಿನ ಬೆಳಗ್ಗೆ ನೀಡಿರುತ್ತೇನೆ. ನಾನು ಆ ದಿನ ಹಸು ಅಪಘಾತಕ್ಕೊಳಾದ ನೋವಿನಲ್ಲಿ ಪೋಲಿಸರಿಗೆ ದೂರನ್ನು ನೀಡಲು ಹೋಗಿರಲಿಲ್ಲ. ನಾನು ಯಾವ ದಿನ ಪೋಲಿಸರಿಗೆ ಆ ರೀತಿ ದೂರು ನೀಡಿರುತ್ತೇನೆಂದು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ದೂರು ಕೊಟ್ಟ ನಂತರ ಪೋಲಿಸರು ಯಾವ ದಿನದಂದು ಸ್ಥಳಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.ಈ ಪ್ರಕರಣದ ಸಂಬಂಧ ನಾನು ಪೋಲಿಸರಿಗೆ ದೂರನ್ನು ನೀಡಿದ ನಂತರ ಪೋಲಿಸರು ಒಮ್ಮೆ ಮಾತ್ರ ಸ್ಥಳಕ್ಕೆ

ಬಂದಿರುತ್ತಾರೆ. ಸದರಿ ಪೋಲಿಸರು ಅಪಘಾತವಾದ ಸ್ಥಳಕ್ಕೆ ಬಂದಿರುತ್ತಾರೆ. ಅಲ್ಲಿ ಪೋಲಿಸರು ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಆಲನಹಳ್ಳಿಯಲ್ಲಿರುವ ಮೈದಾನದಲ್ಲಿ ಸಂಜೆಯ ಹೊತ್ತಿನಲ್ಲಿ ಹಲವಾರು ಮಕ್ಕಳು ಆಟವಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಯಾವುದೇ ಮಕ್ಕಳು ಆಟವಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಹಸುಗಳನ್ನು ಮೇಯಿಸಲು ತೆಗೆದುಕೊಂಡು ಹೋಗಿರುವುದಿಲ್ಲ ಬದಲಾಗಿ ಅವುಗಳು ಮೇಯಲು ದಾರಿಬದಿ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ಮೇಲೆ ಹೇಳಿದ ಆಲನಹಳ್ಳಿ ಮೈದಾನದಲ್ಲಿ ಮಕ್ಕಳು ಆಟವಾಡುತ್ತಿರುವಾಗ ಚೆಂಡು ಹಸುವಿಗೆ ತಗಲಿದ್ದು ಆಗ ಅದು ಗಾಬರಿಯಿಂದ ಏಕಾಏಕಿ ರಸ್ತೆಗೆ ಹಾರಿರುತ್ತದೆ ಎಂದರೆ ಸರಿಯಲ್ಲ. ಆಗ ಆರೋಪಿ ತನ್ನ ಆಟೋವನ್ನು ನಿಯಂತ್ರಿಸಲು ಪ್ರಯತ್ನಿಸಿದ್ದು ಆದರೆ ಹಸುವು ಏಕಾಏಕಿ ರಸ್ತೆಗೆ ಹಾರಿದ್ದರಿಂದ ಅಪಘಾತವಾಗಿರುತ್ತದೆ ಹೊರತು ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಸುವು ಆ ರೀತಿ ರಸ್ತೆಗೆ ಏಕಾಏಕಿ ಹಾರಿದ್ದರಿಂದ ಆರೋಪಿಗೂ ಗಾಯವಾಗಿ ಅವರ ಆಟೋಗೆ ಹಾನಿಯಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಆರೋಪಿ ಆಸ್ಪತ್ರೆಗೆ ದಾಖಲಾದ ನಂತರ ಆತನಿಗೆ ತೊಂದರೆ ಆಗಿ ಅದರಿಂದ ನಮಗೆ ಸಮಸ್ಯೆಯಾಗುತ್ತದೆ ಎನ್ನುವ ಕಾರಣದಿಂದ ಆತನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದ ಸಮಯದಲ್ಲಿ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿಯು ರಸ್ತೆಯ ಎಲ್ಲ ನಿಯಮಗಳನ್ನು ಪಾಲಿಸಿಕೊಂಡು ನಿಧಾನವಾಗಿ ಆಟೋವನ್ನು ಚಲಿಸಿಕೊಂಡು ಬರುತ್ತಿದ್ದರೇ ಹೊರತು ಅವರು ಯಾವುದೇ ಅತಿವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ನನ್ನ ಹಸುವಿಗೆ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಸುವೇ ಏಕಾಏಕಿ ರಸ್ತೆಗೆ ಹಾರಿ ಆರೋಪಿ ಹಾಗೂ ಆತನ ಆಟೋಗೆ ಹಾನಿ ಮಾಡಿದ್ದಾಗ್ಯೂ ಸಹ ಆರೋಪಿಯಿಂದ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ ಅದಕ್ಕೆ ಪೂರಕವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**